ತನ್ನ ಊರ ಮನೆಗಾಗಲೀ ಚಂದ್ರಪ್ಪನವರ ಮನೆಗಾಗಲೀ ತನ್ನ ಕೋಟೆ ಮನೆಗೇ ಆಗಲಿ ಹೋಗಲಿಚ್ಛಿಸದ ಪ್ರೊಫೆಸರ್, ಡಾ. ಗಣೇಶರ ಮನೆಗೆ ಹೋಗೋದುಂಟೆ ಎಂಬ ಸಂದೇಹವೂ ನಟರಾಜರ ಮನಸ್ಸಿನಲ್ಲಿ ಮೂಡಿ ಬಂತು.

'ಓ.ಕೆ. ಗುಡ್‌ನೈಟ್' ಎನ್ನುತ್ತಾ ನಟರಾಜ್‌ರು ಡಾ. ಗಣೇಶರ ಕೈಗಳನ್ನು ಆತ್ಮೀಯವಾಗಿ ಕುಲುಕಿದರು. ಡಾ. ಗಣೇಶರು ಥಟ್ಟನೆ ತನ್ನ ಎಡಗೈಯನ್ನು ಹಿಂದಕ್ಕೆಳೆದರು.

'ಯಾಕೆ? ಏನಾಯಿತು?' ನಟರಾಜ್ ಅಚ್ಚರಿಯಿಂದ ಪ್ರಶ್ನಿಸಿದರು.

'ಏನಿಲ್ಲ, ಸ್ವಲ್ಪ ಉಳುಕಿದೆ ಅಷ್ಟೆ. ಯಾಕೊ ಇವತ್ತು ಬಹಳ ಚಳಿ ಅನ್ನಿಸ್ತಾ ಇದೆಯಲ್ಲ?' ಡಾ. ಗಣೇಶರು ವಿಷಯಾಂತರಕ್ಕೆ ಹವಣಿಸಿದ ಹಾಗೆ ಅನ್ನಿಸಿತು.

'ಎಲ್ಲಿ ಕೈ ನೋಡೋಣ?'

'ನಿನ್ನೆಯಿಂದ ವಿಪರೀತ ಚಳಿ ಆರಂಭವಾಗಿದೆ. ನಿಮಗಾದರೆ ಅಡ್ಡಿಯಿಲ್ಲ ಡೆಲ್ಲಿ ಚಳಿಯ' ಎನ್ನುತ್ತಿದ್ದಂತೆಯೆ ನಟರಾಜರು ಡಾ. ಗಣೇಶರ ಎಡಗೈಯನ್ನು ಎಲ್ಲಿ, ನೋಡುವ ಎನ್ನುತ್ತ ತನ್ನ ಕೈಗೆ ತೆಗೆದುಕೊಂಡು ತುಸು ಗಟ್ಟಿಯಾಗಿ ಅದುಮಿದರು.

'ಅಯ್ಯೋ' ಎನ್ನುತ್ತ ಡಾ. ಗಣೇಶ್ ಕೈಯನ್ನು ಕೊಸರಿಕೊಳ್ಳಲು ಯತ್ನಿಸಿದರು.

'ಅರೆ! ಹಿಂಗ್ಯೆ ಬಾತುಹೋಗಿದೆಯಲ್ಲ! ತರಚಿಹೋದ ಹಾಗಿದೆ? ಡಾಕ್ಟರಾಗಿ ಬ್ಯಾಂಡೇಜ್ ಕೂಡ ಮಾಡಿಲ್ಲ ಅಂದ್ರೆ ಹೇಗೆ?' ನಟರಾಜ್ ಅನೇಕ ಪ್ರಶ್ನೆಗಳನ್ನು ಒಮ್ಮೆಲೆ ಎತ್ತಿದರು.

'ಬ್ಯಾಂಡೇಜ್ ಮಾಡುವಂಥ ಗಾಯವೇನೂ ಆಗಿಲ್ಲ' ಕೃತಕ ನಗೆ ಬೀರುತ್ತಾ ಡಾ. ಗಣೇಶ್ ನುಡಿದರು.

'ಮತ್ತಿನ್ನೇನು' ಊತದಲ್ಲಿ ಉಂಗುರ ಹೂತುಹೋಗಿದೆ. ಅದನ್ನು ಕಟ್ ಮಾಡಿಸಿ ತೆಗೆದಾದರೂ ಬ್ಯಾಂಡೇಜ್ ಮಾಡಬಹುದಿತ್ತಲ್ಲ. ಈಗಿನ್ನೇನು ಮಾಡ್ತೀರಿ?' ನಟರಾಜ್ ಕಳಕಳಿ ವ್ಯಕ್ತಪಡಿಸಿದರು.

'ನೀವೇ ಡಾಕ್ಟರಾಗಬಹುದಿತ್ತಲ್ಲ; ನನಗಿಂತ ಹೆಚ್ಚು ನಿಮಗೇ ಗೊತ್ತಿದ್ದ ಹಾಗಿದೆ' ಎಂದು ಡಾ. ಗಣೇಶ್ ಕೃತಕ ನಗೆ ಬೀರುತ್ತ ಪ್ರೊಫೆಸರ್‌ರ ರೂಮಿನ ಕಡೆಗೆ ನಡೆಯತೊಡಗಿದರು.

'ಡಾ. ಗಣೇಶ್, ಒಂದ್ನಿಮಿಷ' ಎನ್ನುತ್ತ ಹೊರಗೋಡೆಯ ಸ್ವಿಚ್ ಅದುಮಿ ಲೈಟ್ ಉರಿಸಿದರು. ಲೈಟಿನ ಬೆಳಕಿಗೆ ಡಾಕ್ಟರ್‌ರ ಮುಖದ ಬೆವರು ಮುತ್ತುಗಳಾಗಿ ಹೊಳೆಯುತ್ತಿದ್ದವು. ನಟರಾಜ್ ತಮ್ಮ ಜೇಬಿನಿಂದ ಪರ್ಸ್ ತೆಗೆದು ಅದರ ಕಳ್ಳಿಯೊಳಕ್ಕೆ ಕೈಹಾಕಿದರು. ಒಳಗಿದ್ದ ಎಲೆಯ ಸಣ್ಣ ಪೊಟ್ಟಣವನ್ನು ಹೊರತೆಗೆದರು. ಡಾ. ಗಣೇಶ್‌ರ ಎಡಗೈಯನ್ನು ಮತ್ತೊಮ್ಮೆ ತಮ್ಮ ಕೈಯಲ್ಲಿ ತೆಗೆದುಕೊಂಡು ಪೊಟ್ಟಣದಲ್ಲಿದ್ದ ಹರಳನ್ನು ಅವರ ನವರತ್ನ ಉಂಗುರದ ಖಾಲಿ ಕಳ್ಳಿಗೆ ಮೃದುವಾಗಿ ಒತ್ತಿ, ತುಂಬಿದರು.

'ಅಯ್ಯೊ, ಇದೇನು ಮಾಡುತ್ತಿದ್ದೀರಿ?' ಡಾ. ಗಣೇಶ್ ನೋವುಂಡರಿಯದ ಹೊಸ ರೋಗಿಯಂತೆ ಕಿರುಚಿದರು.

## ಕಳೆದ ಸಂಚಿಕೆಯಲ್ಲಿ



ಪಾರ್ಟಿಯಲ್ಲಿ ಚಿತ್ತಾಗುವಂತೆ ಕುಡಿದು ಬಂದಿದ್ದ ಪ್ರೊ. ಭಾಸ್ಕರ್ ಅವರನ್ನು ಮನೆಯಲ್ಲಿ ಆಘಾತವೊಂದು ಎದುರುಗೊಂಡಿತು. ಪತ್ನಿ ಶೀಲಾ ನಿಶ್ಚೇಷ್ಟಿತಳಾಗಿ ಬಿದ್ದಿದ್ದಳು. ಶೀಲಾ ಕೊನೆಯುಸಿರೆಳೆದಿರುವುದನ್ನು ಡಾ. ಗಣೇಶ್ ಸ್ಪಷ್ಟಪಡಿಸಿದರು. ದೀಪೂ ಕೂಡ ಮನೆಯಲ್ಲಿರದೆ ನಾಪತ್ತೆಯಾಗಿದ್ದ. ಪತ್ನಿಯ ಅನಿರೀಕ್ಷಿತ ಸಾವಿನಿಂದ ಪ್ರೊ. ಭಾಸ್ಕರ್ ಕಂಗೆಟ್ಟರು. ಮನೆಯಲ್ಲಿನ ಚಿನ್ನಾಭರಣಗಳು ಕಾಣೆಯಾಗಿದ್ದವು. ದುರ್ಘಟನೆಯ ಬಗ್ಗೆ ಅತಿಥಿಯಾಗಿ ಊರಿಗೆ ಬಂದಿದ್ದ ನಟರಾಜ ಪಟ್ಟಣಶೆಟ್ಟಿಯವರು ತಲೆಕೆಡಿಸಿಕೊಂಡರು; ಕೊಲೆಯ ಸಿಕ್ಕುಗಳನ್ನು ಬಿಡಿಸಲು ಪ್ರಯತ್ನಿಸಿದರು. ತನಿಖೆಯ ತೋರುಬೆರಳಿಗೆ ಗುರಿಯಾದ ಪವನ್ ವಿಚಾರಣೆಗೆ ಗುರಿಯಾದ. ಶೀಲಾಳ ಕೊಲೆಗೂ ತನಗೂ ಸಂಬಂಧವಿಲ್ಲ ಎಂದು ಬಲವಾಗಿ ವಾದಿಸಿದ. ಆದರೆ, ನಟರಾಜರ ಹದ್ದಿನಕಣ್ಣಿನಿಂದ ತಪ್ಪಿಸಿಕೊಳ್ಳುವುದು ಅವನಿಗೆ ಸಾಧ್ಯವಾಗಲಿಲ್ಲ. ಶೀಲಾಳ ಮನೆಯಿಂದ ಚಿನ್ನಾಭರಣಗಳನ್ನು ಕದ್ದಿರುವುದನ್ನು ಒಪ್ಪಿಕೊಂಡ. ಆದರೆ, ಶೀಲಾಳ ಕೊಲೆ ಮಾಡುವ ಉದ್ದೇಶವೇ ತನಗಿರಲಿಲ್ಲವೆಂದು ಸ್ಪಷ್ಟವಾಗಿ ಹೇಳಿದ.

'ಚೆನ್ನಾಗಿ ಒಪ್ಪುತ್ತದೆ ಅಲ್ಲವೆ?' ಎನ್ನುತ್ತ ನಟರಾಜ್ ಒಮ್ಮೆ ಉಂಗುರವನ್ನು ಒಮ್ಮೆ ಡಾ. ಗಣೇಶರ ಮುಖವನ್ನು ನೋಡಿದರು. ಹರಳನ್ನು ಕಟ್ಟಿದ್ದ ಕಾಫಿ ಎಲೆ ಒಣಗಿಹೋಗಿತ್ತು. ಅದನ್ನು ನಟರಾಜ್ ಪರಪರನೆ ಹರಿದು ಚೂರು ಮಾಡುತ್ತಿದ್ದಂತೆಯೆ ಡಾ. ಗಣೇಶರಿಗೆ ತಾನೇ ಆ ಎಲೆಯಾದಂತೆ ಭಾಸವಾಯಿತು.

16

ಪಾರ್ಟಿಯ ದಿನ ನಡೆದುದೇನು? ಎಂಬುದನ್ನು ಡಿ.ಎಸ್.ಪಿ. ಪುಟ್ಟಸೋಮೇಗೌಡರ ಮುಂದೆ ಡಾ. ಗಣೇಶ್ ವಿವರಿಸತೊಡಗಿದರು.

'ಅಂದು ರಾತ್ರಿ ಶೀಲಾ ನನಗೆ ಫೋನ್ ಮಾಡಿ 'ಮನೆಯಲ್ಲಿ ಯಾರೂ ಇಲ್ಲ, ದೀಪೂ ಕೆಟ್ಟು ಹೋಗಿದ್ದಾನೆ, ಬೆಳಗ್ಗೆ ಮನೆ ಬಿಟ್ಟು ಹೋದವ ಇನ್ನೂ ಬಂದಿಲ್ಲ' ಎಂದಿದ್ದಳು. ಆಕೆ ತನ್ನ ಆ ರಾತ್ರಿಯ ಒಂಟಿತನದ ಬಗ್ಗೆ ಫೋನ್ ಮೂಲಕ ತನ್ನ ಗಂಡನಿಗೆ ಹೇಳುವುದು ಬಿಟ್ಟು ನನಗೆ ಹೇಳಿದ್ದಾಳೆ. ಯಾಕಿರಬಹುದು? ಅದಕ್ಕೆ ಇನ್ನೇನಾದರೂ ಕಾರಣವಿರಬಹುದೆ?' ಎಂದು ಹುಡುಕಾಡಿದೆ. ಈ ನಡುವೆ ಇನ್ನೇನಾದರೂ ಆಕೆಯ ಫೋನ್ ಬರಬಹುದೇ ಅಂತ ಕಾದೆ. ಒಮ್ಮೆ ನಾನೇ ಡಯಲ್ ಮಾಡಿದೆ. ಯಾಕೋ ಬೇಡವೆನ್ನಿಸಿ ತಕ್ಷಣ ರಿಸೀವರ್ ಕೆಳಗಿಟ್ಟೆ. ಬೇಗ ಬೇಗ ಕೆಲಸ ಮುಗಿಸಿ, ಉಳಿದದ್ದನ್ನು ಸಹಾಯಕನಿಗೆ ನೋಡಿಕೊಳ್ಳುವಂತೆ ಹೇಳಿ, ಪಾರ್ಟಿಗೆ ಹೋಗುತ್ತಿರುವುದಾಗಿ ತಿಳಿಸಿ ಹೊರಟೆ. ಕಾರಿನಲ್ಲಿ ನೇರವಾಗಿ ಪ್ರೊಫೆಸರ್ ಭಾಸ್ಕರ್ ಮನೆಯ ಗೇಟಿನ ಬಳಿ ಬಂದೆ. ಕಾರು ನಿಲ್ಲಿಸಿ'–

'ಗೇಟಿನ ಬಳಿ ಕಾರು ನಿಲ್ಲಿಸಿದಿರಾ? ಇಲ್ಲಾ...' ನಟರಾಜ್ ನಡುವೆ ಮಾತನಾಡಿದರು.

'ಇಲ್ಲ, ಗೇಟಿನ ಬಳಿ ಕಾರು ನಿಲ್ಲಿಸಲಿಲ್ಲ. ಎಲ್ಲಾದರೂ ದೀಪೂ ಬಂದು ನನ್ನ ಕಾರು ಅಲ್ಲಿರೋದನ್ನು ಕಂಡು ಪ್ರೊಫೆಸರ್ ಕೂಡ ಅಲ್ಲಿಲ್ಲದಾಗ ಅಪಾರ್ಥ ಕಲ್ಪಿಸಿದರೇಂತ ಸಂದೇಹವಾಗಿ, ಹೊರಟವ ಮರಳಿ ಬಂದು ಕಾರನ್ನು ಸ್ವಲ್ಪ ಮುಂದೆ ತಿರುವಿಗೆ ಕೊಂಡೊಯ್ದು ನಿಲ್ಲಿಸಿದೆ. ಮೆಟ್ಟಿಲೇರಿ ಅಂಗಳಕ್ಕೆ ಬಂದವನೇ ಬೆಲ್ ಮಾಡಿದೆ. ಶೀಲಾ 'ಯಾರು?' ಎಂದಳು. ಆಕೆಯ ಧ್ವನಿ ನಡುಗುತ್ತಿತ್ತು.

'ನಾನು ಗಣೇಶ್' ಎಂದೆ.

'ಓ. ನೀವಾ?' ಎನ್ನುತ್ತಾ ಬಂದು ಬಾಗಿಲು ತೆರೆದಳು.

'ದೀಪೂ ಇನ್ನೂ ಬಂದಿಲ್ವೆ?' ಎನ್ನುತ್ತ ಒಳಗೆ ಹೋದೆ.

'ಇಲ್ಲ. ಪಾರ್ಟಿಗೆ ಹೋಗಲ್ವೆ?' ಅಂತ ಕೇಳಿದಳು.

'ಇನ್ನು ಹೋಗಬೇಕಷ್ಟೆ' ಎಂದೆ.

'ಆಮೇಲೆ ನಾನು ಅವರಿಗೂ ಫೋನ್ ಮಾಡಿದೆ. ಅವರು ನನ್ನನ್ನೇ ಗದರಿದರು. ನೀವೂ ಹೋಗಬಹುದಿತ್ತಲ್ಲ?'

'ನಿನಗೆಲ್ಲಾದರೂ ಹೆದರಿಕೆಯಿಂದ ಜ್ವರಗಿರ ಬಂದ್ರೆ ಆಮೇಲೆ ನಾನೇ ನೋಡ್ಬೇಕಲ್ಲ. ಹೇಗಿದ್ದೀಯಾ? ನೋಡುವಾ ಕೈ ಕೊಡು' ಎಂದೆ.

'ಬೇಡಪ್ಪಾ, ನಂಗೇನೂ ಆಗಿಲ್ಲ' ಎಂದಳು.

ಆದ್ರೂ ನೋಡೋಣ ಎಂದು ಕೈ ಹಿಡಿದುಕೊಂಡೆ. ಅವಳು ಪ್ರತಿಭಟಿಸಲಿಲ್ಲ. ಒಂದಷ್ಟು ಹೊತ್ತು ಪಲ್ಸ್ ನೋಡುತ್ತ, ವಾಚ್ ನೋಡುತ್ತ, 'ಜ್ವರ ಇಲ್ಲ, ಆದ್ರೆ ದೇಹದ ಬಿಸಿ ಸ್ವಲ್ಪ ಏರಿದ ಹಾಗಿದೆಯಲ್ಲ' ಎಂದು ನಕ್ಕೆ. ಆಕೆಯೂ ನಕ್ಕಳು.

'ಈ ಪ್ರೊಫೆಸರನ್ನು ಹೀಗೆ ನಿತ್ಯವೂ ಕಾಯ್ತಾ ಕೂತ್ರೆ ದೇಹದ ಬಿಸಿ ಮಾತ್ರ ಅಲ್ಲ; ಬಿ.ಪಿ. ಕೂಡ ಏರಬಹುದು, ಅಲ್ವೆ?' ಎಂದ ಮಾತಿಗೆ ಪ್ರತಿಕ್ರಿಯೆ ವ್ಯಕ್ತಪಡಿಸದೆ 'ಕೂತ್ಕೊಳ್ಳಿ, ಸ್ವಲ್ಪ ಕಾಫಿ ತರ್‍ತೇನೆ' ಎನ್ನುತ್ತ ಮುಂಬಾಗಿಲನ್ನು ಹಾಕಿ, ಅಡುಗೆ ಮನೆಗೆ ನಡೆದಳು. ನಾನು ಒಳಗಡೆ ಇರುವಾಗ ಆ ರಾತ್ರಿಯಲ್ಲಿ ಆಕೆ ಮುಂಬಾಗಿಲನ್ನು ಯಾಕೆ ಹಾಕಬೇಕಿತ್ತು? ಅದನ್ನು ನೆನೆಸಿಕೊಂಡದ್ದೇ ನನಗೆ ಮೈಯೆಲ್ಲ ಬೆಚ್ಚಗಾಯಿತು. ಕುಳಿತಲ್ಲಿ ಕುಳ್ಳಿರಲಾಗಲಿಲ್ಲ. ಎದ್ದು ಅಡುಗೆ ಮನೆಯ ಕಡೆಗೆ ನಡೆದೆ. ಆಕೆ ಕಾಫಿಯೊಂದಿಗೆ ಹೊರಬಂದಳು. ಪ್ರೊಫೆಸರ್ ಬಗ್ಗೆ ಮಾತೆತ್ತಿದೆ. 'ಎಷ್ಟೆಂದರು ದೊಡ್ಡ ಸೈಂಟಿಸ್ಟ್ ಅಲ್ವೆ? ನಾವೆಲ್ಲ ಪುಟಗೋಸಿ ಡಾಕ್ಟ್ರುಗಳು